

# ‘ಅಪ್ ಟು ಡೇಟ್’ ಜ್ಯೋತಿಷಿ !

ಭಾವು ಪತ್ತಾರ್

**15 ರೂಪಾಯಿ ಕೂಡಾ ಹುಟ್ಟದ ಗಿರಾಕಿಗಳಿಗೆ ಜ್ಯೋತಿಷ್ಯ ಹೇಳಿ ಉದ್ಧಾರ ಆಗುವುದುಂಟೆ? ಒಮ್ಮೆ ನಮ್ಮ ಜ್ಯೋತಿಷಿ ಬೇರೆ ಊರಿಗೆ ಹೋಗಿ ತನ್ನದೇ ಜಾತಕವನ್ನು ಇನ್ನೊಬ್ಬ ಹೆಸರುವಾಸಿ ಜ್ಯೋತಿಷಿಗೆ ತೋರಿಸಿದ! ಸುಳ್ಳು ಸುಳ್ಳೇ ಅವರು ಇವನ ಭಾಗ್ಯದ ಬಗ್ಗೆ ಹೇಳಿದ್ದನ್ನು ಕೇಳಿ ಉಗಿದು ಹೊರಬಂದ!**

■ **ಇ.ಆರ್. ರಾಮಚಂದ್ರನ್, ಮೈಸೂರು**

ಜ್ಯೋತಿಷಿಗಳನ್ನು ಬಹುತೇಕ ಜನ ಸರ್ವಜ್ಞರು ಅಂತ ತಿಳಿದುಕೊಂಡಿದ್ದಾರೆ. ಅವರದ್ದೂ ಒಂದು ವೃತ್ತಿ ಕಣ್ರೀ. ಬೇರೆ ವೃತ್ತಿಯಲ್ಲಿರುವರ ಹಾಗೆ, ಜ್ಯೋತಿಷಿಗಳಿಗೂ ತಮ್ಮ ವೃತ್ತಿಯಲ್ಲೂ ಮುಂದೆ ಏನು ಕಾದಿದೆಯಪ್ಪಾಂತ ಹೆದರಿಕೆ ಬರೋದು ಸಹಜವೇ. ಹೀಗೆ ವೃತ್ತಿಯಲ್ಲಿ ಬಂದ ಸಂಕಷ್ಟಗಳನ್ನು ಎದುರಿಸಲು ಅವರೂ ಆಗಾಗ್ಗೆ ಅಪ್‌ಡೇಟ್ ಆಗುತ್ತಲೇ ಇರುತ್ತಾರೆ. ರೇಡಿಯೋಗೆ ಪ್ರಮೋಷನ್ ಆಗಿ ಗ್ರಾಮಫೋನು, ಟ್ರಾನ್ಸಿಸ್ಟರ್, ಟಿ.ವಿ., ವೀಡಿಯೋ ಆಗಲಿಲ್ವೆ? ಅರ್ಧ ಮಣ ಭಾರದ ಕರಿ ಟೆಲಿಫೋನು, ಪ್ರೆಸ್ ಬಟನ್ ಫೋನ್ ಆಗಿ, ಕೊನೆಗೆ ಸಂಗೀತ ಹಾಡುತ್ತಾ ಕೈಲೇ ಬಳುಕುವ ಬಣ್ಣಬಣ್ಣದ ಮೊಬೈಲಾಗಲಿಲ್ವೇ? ಯಾಕೆ, ಭೂಜು ತುಂಬಿದ, ತೂತಿರುವ ಕ್ಯಾನ್‌ನಿಂದ ಕಡಲೇಕಾಯಿ ಎಣ್ಣೆ ಸೋರಿ ಸೀದಾ ಮೈದಾ ಹಿಟ್ಟು, ಗೋಧಿ ಹಿಟ್ಟಿನ ಗೋಣಿ ಚೀಲದಲ್ಲಿ ಸೇರಿ ಕಮಟು ವಾಸನೆಗೆ ಬೀಡಾದ ಕಾರ್ನರ್ ದಿನಸಿ ಅಂಗಡಿಗಳು, ಈಗ  ಫಳಫಳಾಂತ ಹೊಳೆಯುವ ಮಾಲ್ ಆಗಲಿಲ್ಲವೇ? ಹಾಗೆಯೇ ಜ್ಯೋತಿಷಿಗಳೂ ಅಪ್‌ಡೇಟ್ ಆಗಲೇಬೇಕು.

ಜ್ಯೋತಿಷಿಯ ಕಸುಬಿನಲ್ಲಿ ಬದಲಾವಣೆ ಬರಲು ಹೇಗೆ ಸಾಧ್ಯ? ಅವರ ಕವಚದಲ್ಲಿ ಮುಖ್ಯವಾದ ಬತ್ತಳಿಕೆ ಎರಡು. ಒಂದು ಜಾತಕ. ಇನ್ನೊಂದು ಇದ್ದದ್ದೂ ಇಲ್ಲದ್ದೂ ಸೇರ್ಸಿ ರಸವತ್ತಾಗಿ ವರ್ಣಿಸುವ ಅವರ ವಾಕ್ಚಾಳಿತನ. ‘ಕುರಿ ಕೊಬ್ಬಿದಷ್ಟೂ ಕಟುಕನಿಗೆ ಲಾಭ’ ಎಂಬ ಹಾಗೆ, ಕಸ್ಟಮರ್‌ಗಳನ್ನು ಅಟ್ಟಕ್ಕೆ ಏರಿಸಿ ಕೇಳಿದಷ್ಟು ಕಾಸು ಕಕ್ಕಿಸೋದು ಜುಜುಬಿ ವಿದ್ಯೆ ಅಂತ ಅಂದ್ಕೋಬೇಡಿ. ಯಾವ